# ಹಳೆಯ ಆಭರಣ ಪೆಟ್ಟಿಗೆ

ಸ್ನೇಹಿತೆ ಉಮಾ ಸುಬ್ಬರಾವ್ ಮನೆಯಲ್ಲಿ ಇರುವ ಈ ಹಿತ್ತಾಳೆ ಆಭರಣ ಪೆಟ್ಟಿಗೆಗೆ ಸುಮಾರು ನೂರು ವರ್ಷಗಳೇ ಆಗಿರಬಹುದೇನೋ! ಅವರ ಅತ್ತೆಯ ಅತ್ತೆಯದ್ದಂತೆ. ಅದಕ್ಕೆ ಪುಟ್ಟ ಕೀ ಇದ್ದು ಲಾಕ್ ಮಾಡಬಹುದಿತ್ತಂತೆ. ಚಿನ್ನದ ಒಡವೆಗಳನ್ನು ಜೋಪಾನವಾಗಿಡಲು ಬಳಸುತ್ತಿದ್ದು, ಬಳೆ, ಸರ, ಕಿವಿಯೋಲೆಗಳನ್ನು ಪ್ರತ್ಯೇಕವಾಗಿಡಲು ಪೆಟ್ಟಿಗೆಯಲ್ಲಿ ಅವಕಾಶವಿದೆ. ಈಗ ಇದು 'ಆ್ಯಂಟಿಕ್, ಪೀಸ್' ಅನ್ನೋ ಹೆಸರು ಪಡೆದು ಅವರ ಮನೆ ಶೋಕೇಸನ್ನು ಅಲಂಕರಿಸಿದೆ.

**-ಸುಮಾ ಕೆ.ಆರ್., ಶಿವಮೊಗ್ಗ**





# ಕಸುವಿನ ಕೆಸು!

ರುಚಿಕರ ಆಹಾರವಾದ ಕೆಸುವಿಗೆ ಸರಿಯಾದ ಕಸು (ಗೊಬ್ಬರ) ಸಿಕ್ಕರೆ ಹೇಗೆ ಬೆಳೆಯಬಹುದು ಎಂಬುದಕ್ಕೆ ಇಲ್ಲಿದೆ ಉದಾಹರಣೆ. ಯಲ್ಲಾಪುರದ ಕೃಷಿಕ ಹಾಗೂ ಸಮಾಜ ಸೇವಕ ಎಂ.ಆರ್.ಹೆಗಡೆ, ಕುಂಬ್ರಿಗುಡ್ಡೆಯರ ದೋಣಗಾರ ತೋಟದಲ್ಲಿ ಬೆಳೆದ ಕೆಸುವಿನ ಎಲೆಯ ಉದ್ದ ಐದು ಅಡಿ ಹಾಗೂ ಅಗಲ ಮೂರೂವರೆ ಅಡಿ!

**-ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ**

# ಕಲ್‌ಸಾರೆ

ಹಿಂದೆ ಜನ ಸಾಮಾನ್ಯರು ಅಡುಗೆಗೆ ಬಳಸುತ್ತಿದ್ದ ಕಲ್ಲಿನ ಪಾತ್ರೆಗಳಿವು. ಇದರಲ್ಲಿ ಸಾಂಬಾರ್ ಹಾಕಿ ಒಲೆಯ ಮೇಲೆ ಕುದಿಸಲು ಇಟ್ಟರೆ ಒಮ್ಮೆ ಕುದ್ದ ಮೇಲೆ ಬೆಂಕಿ ತೆಗೆದರೂ ಕುದಿಯುತ್ತಾ ಇರುತ್ತದೆ. ಇದರಲ್ಲಿ ಮಾಡಿದ ಸಾಂಬಾರ್ ರುಚಿಯು ಜಾಸ್ತಿ. ಅಡುಗೆಗೆ ಬಳಸುವ ಆರೋಗ್ಯಕರ ಪಾತ್ರೆಗಳು ಎಂದು ಈಗ ಪುನಃ ಮಣ್ಣಿನ ಪಾತ್ರೆ, ಕಲ್‌ಸಾರೆಗಳನ್ನು ಬಳಸಲು ಪ್ರೋತ್ಸಾಹಿಸುತ್ತಿದ್ದಾರೆ. ಮೂಲೆ ಸೇರಿದ ಕಲ್‌ಸಾರೆಗಳನ್ನು ತೆಗೆದು ಬಳಸಲು ಶುರು ಮಾಡಿದರೆ ಒಳ್ಳೆಯ ಆರೋಗ್ಯ ಸಿಗಬಹುದೇನೋ!

**-ಪ್ರಭಾ ಪಿ. ಶಾಸ್ತ್ರಿ, ಶಿವಮೊಗ್ಗ**

